ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕ 31 12 2005ರಿಂದ ಕುದುರೆಮುಖ ಕಬ್ಬಿಣ ಅದಿರು ಕಂಪೆನಿ ನಿಯಮಿತ ಸಂಸ್ಥೆಯ ಗಣಿಗಾರಿಕೆ ಸ್ಥಗಿತಗೊಂಡಿದೆ ಕುದುರೆಮುಖ ಕಬ್ಬಿಣ ಅದಿರು ಕಂಪೆನಿ ನಿಯಮಿತ ಸಂಸ್ಥೆಯು ಕೇಂದ್ರ ಸ್ವಾಮ್ಯದ ಸಂಸ್ಥೆಯಾಗಿದ್ದು ಅಲ್ಲಿನ, ನೌಕರರ ಸೇವಾ ವಿಷಯವು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ ಸಂಸ್ಥೆಯ ಗಣಿಗಾರಿಕೆ ಕೆಲಸ ಸ್ಥಗಿತಗೊಂಡಿದ್ದರೂ, ಸಂಸ್ಥೆಯು ಯಾವುದೇ ನೌಕರರನ್ನು ಇದುವರೆವಿಗೂ ಕೆಲಸದಿಂದ ತೆಗೆದುಹಾಕಿರುವುದಿಲ್ಲ ಹಾಗೂ ಈ ಹಿಂದೆ ಯಾವ ರೀತಿ ನೌಕರರಿಗೆ ವೇತನ ನೀಡಲಾಗುತ್ತಿತ್ತೋ ಅದೇ ರೀತಿ ನೌಕರರಿಗೆ ವೇತನವನ್ನು ಕುದುರೆಮುಖ ಕಂಪೆನಿಯು ನೀಡುತ್ತಿದೆ ಎಂದು ತಿಳಿದುಬಂದಿದೆ ಆದರೆ, ಗಣಿಗಾರಿಕೆಗೆ ಪೂರಕವಾಗಿದ್ದಂತಹ ಹಲವಾರು ಕಾರ್ಯಗಳು ನಿಂತಿರುವುದರಿಂದ, ಈ ಕಾರ್ಯಗಳಲ್ಲಿ ತೊಡಗಿಸಿಕೊಂಡಂತಹ ದಿನಗೂಲಿ ನೌಕರರುಗಳಿಗೆ ಕೆಲಸವಿಲ್ಲದಿರುವುದು ತಿಳಿದುಬಂದಿದೆ ಇವರು ಸಂಸ್ಥೆಯ ಖಾಯಂ ನೌಕರುಗಳಲ್ಲಿ ಈ ನೌಕರರ ಮನವರ್ಸತಿಗೆ ರಾಜ್ಯ ಸರ್ಕಾರ ಯಾವುದೇ ಯೋಜನೆಯನ್ನು ಹಾಕಿಕೊಂಡಿಲ್ಲ

ಕರ್ನಾಟಕದಲ್ಲಿ ಕೈಗಾರಿಕ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗಲು ಅನುಕೂಲವಾಗುವಂತೆ ಕುದುರೆಮುಖ ಕಬ್ಬಿಣ ಅದಿರು ಕಂಪೆನಿ ನಿಯಮಿತ ಸಂಸ್ಥೆಗೆ ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ 116 50 ಹೆಕ್ಟೇರ್ ಪ್ರದೇಶವನ್ನು ಹಾಗೂ ಬಳ್ಳಾರಿ ಜಿಲ್ಲೆಯ ರವಣದುರ್ಗ ಪ್ರದೇಶದಲ್ಲಿ 810 00 ಹೆಕ್ಟೇರ್ ಪ್ರದೇಶವನ್ನು ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು ಗಣಿಗಾರಿಕೆಗಾಗಿ ಒದಗಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಕುದುರೆಮುಖ ಕಬ್ಬಿಣದ ಅದಿರು ಕಂಪೆನಿ ನಿಯಮಿತ ಸಂಸ್ಥೆಗೆ ಬೇರೆ ಹೊಸ ಗಣಿಗುತ್ತಿಗೆ ಮಂಜೂರಾದಾಗ ಸದರಿ ದಿನಗೂಲಿ ನೌಕರರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಸಂಬಂಧಿಸಿದ ಕಂಪೆನಿಯವರು ಸೂಕ್ತಕ್ರಮ ಕೈಗೊಳ್ಳುವರು ಎಂದು ನಿರೀಕ್ಷಿಸಲಾಗಿದೆ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

780 (889) ಶ್ರೀ ಪಾಟೀಲ ಡಿ ಆರ್ (ಗದಗ) ಮಾನ್ಯ ಯೋಜನಾ ನಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಣಕಾಸು ವರ್ಷದಲ್ಲಿ ಯೋಜನೆಗಳಿಗಾಗಿ ನಿಗದಿಯಾದ ಹಣವೆಷ್ಟು , (ಇಲಾಖಾವರು ಮಾಹಿತಿ ನೀಡುವುದು) ,

ಆ) ಇದರಲ್ಲಿ ರಾಜ್ಯದ ಹಾಗೂ ಕೇಂದ್ರದ ಪಾಲೆಷ್ಟು ,

ಇ) 2007ನೇ ಜನವರಿ 31ರವರೆಗೆ ವಿವಿಧ ಇಲಾಖೆಗಳಲ್ಲಿ ಖರ್ಚಾದ ಹಣ ಎಷ್ಟು , (ಇಲಾಖಾವಾರು ಮಾಹಿತಿ ನೀಡುವುದು) ,

ಈ) ಇನ್ನೂ ಎರಡು ತಿಂಗಳೊಳಗಾಗಿ ನಿರ್ಧರಿಸಿದ ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡಲು ಸರಕಾರ ಕೈಗೊಳ್ಳುವ ಕ್ರಮಗಳೇನು ?

ಶ್ರೀ ರಾಮಚಂದ್ರ ಗೌಡ (ಯೋಜನಾ ಸಚಿವರು)

ಅ) 2006–07ನೇ ಸಾಲಿನ ಹಣಕಾಸು ವರ್ಷದಲ್ಲಿ ಯೋಜನೆಗಳಿಗಾಗಿ ರೂ 18527 99 ಕೋಟಿಗಳಷ್ಟು ಹಣ ನಿಗದಿಪಡಿಸಲಾಗಿದೆ ಇಲಾಖಾವಾರು ಮಾಹಿತಿಯನ್ನು ಲಗತ್ತಿಸಿದ ಅನುಬಂಧದ ಅಂಕಣ 5 ರಲ್ಲಿ ವಿವರಿಸಲಾಗಿದೆ

ಆ) ಇದರಲ್ಲಿ ರಾಜ್ಯದ ಪಾಲು ಹಾಗೂ ಕೇಂದ್ರದ ಪಾಲಿನ ವಿವರ ಈ ಕೆಳಕಂಡಂತಿದೆ

1 ರಾಜ್ಯದ ಪಾಲು ರೂ 16166 00 ಕೋಟಿ

2 ಕೇಂದ್ರದ ಪಾಲು ರೂ 2361 99 ಕೋಟಿ

ಒಟ್ಟು ರೂ 18527 99 ಕೋಟಿ

ಇ) ಈಗಿರುವ ಎಂಎಂಆರ್ ಪರಿಶೀಲನಾ ಪದ್ಧತಿಯನ್ವಯ ಆಡಳಿತ ಇಲಾಖೆಗಳಲ್ಲಿ ಫೆಬ್ರವರಿ ತಿಂಗಳಲ್ಲಿ ಡಿಸೆಂಬರ್ 2006ರವರೆಗಿನ ಪ್ರಗತಿಯು ಮಾತ್ರ ಲಭ್ಯವಿದ್ದು ಜನವರಿ 2007ರ ಅಂತ್ಯದವರೆಗಿನ ಮಾಹಿತಿಯು ಮಾರ್ಚ್ 2007ರಲ್ಲಿ ಲಭ್ಯವಾಗುವುದು ಆದುದರಿಂದ ಡಿಸೆಂಬರ್ 2006ರ ಅಂತ್ಯದವರೆಗೆ ರೂ 10282 82 ಕೋಟಿಯಷ್ಟು ಹಣ ವಿವಿಧ ಯೋಜನೆಗಳಿಗಾಗಿ ಖರ್ಚಾಗಿರುತ್ತದೆ ಇಲಾಖಾವಾರು ವಿವರಗಳನ್ನು ಲಗತ್ತಿಸಿದ ಅನುಬಂಧದ ಅಂಕಣ 6ರಲ್ಲಿ ಮೂರೈಸಲಾಗಿದೆ

ಈ) ಎಲ್ಲಾ ಆಡಳಿತ ಇಲಾಖೆಗಳಿಗೆ ಆಯವ್ಯಯದಲ್ಲಿ ಒದಗಿಸಿದ ಹಣವನ್ನು ಆರ್ಥಿಕ ವರ್ಷದ ಕೊನೆಯೊಳಗೆ ವಿನಿಯೋಗಿಸಿ ಈ ವರ್ಷ ನಿಗದಿಪಡಿಸಲಾಗಿರುವ ಗುರಿ ಸಾಧಿಸಲು ಸೂಚನೆಗಳನ್ನು ನೀಡಲಾಗಿದೆ

ಅನುಬಂಧ

2006–07ನೇ ಹಣಕಾಸು ವರ್ಷದಲ್ಲಿ ಯೋಜನೆಗಳಿಗಾಗಿ ನಿಗದಿಯಾದ ಹಣ ಹಾಗೂ ಡಿಸೆಂಬರ್ 2006ರವರೆಗೆ ವೆಚ್ಚದ ವಿವರ

(ರೂ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಇಲಾಖೆ	ಯೋಜನಾ ಆಯವ್ಯಯ			
		ರಾಜ್ಯದ ಪಾಲು	ಕೇಂದ್ರದ ಪಾಲು	ಒಟ್ಟು	ವೆಚ್ಚ
1	2	3	4	5	6
1,	ಕೃಷಿ	210 49	51 58	262 07	221 15
2	ಜಲಾನಯನ	282 91	250 10	533 01	166 53
3,	ತೋಟಗಾರಿಕೆ	104 13	6 63	110 76	22 38
4	ಗ್ರಾಮೀಣ ಅಭಿವೃದ್ಧಿ & ಪಂಚಾಯತ್ ರಾಜ್	1091 32	810 51	1901 83	977 92
5	ಪಶುಸಂಗೋಪನೆ	74 10	76 06	150 16	46 89
6	ಮೀನುಗಾರಿಕೆ	19 72	9 62	29 34	9 98
7	ಅರಣ್ಯ	125 78	20 57	146 35	46 90
8	ಜೀವಿಶಾಸ್ತ್ರ ಮತ್ತು ಪರಿಸರ	13 20	18 90	32 10	7 13
9	ಸಹಕಾರ	136 38	0 78	137 16	32 42
10	ಸಣ್ಣ ನೀರಾವರಿ ಮತ್ತು ಪ್ರವಾಹ ನಿಯಂತ್ರಣ	424 55	150 00	574 55	163 88
11	ಬೃಹತ್ ಮತ್ತು ಮಧ್ಯಮ ನೀರಾವರಿ	3628 14	0 00	3628 14	2995 28
12	ಕಾಡಾ	188 05	11 88	199 93	107 51
13	ಇಂಧನ	1705 03	0 00	1705 03	870 55
14	ಲೋಕೋಪಯೋಗಿ	1445 41	7 00	1452 41	1208 00
15	ವಾಣಿಜ್ಯ ಮತ್ತು ಕೈಗಾರಿಕೆ	146 24	26 69	172 93	73 80
16	ರೇಷ್ಮೆ	23 30	12 75	36 05	16 71

1	2	3	4	5	6
17	ಸಕ್ಕರೆ	1 00	0 00	1 00	0 00
18	ಗಣಿ ಮತ್ತು ಭೂ ವಿಜ್ಞಾನ	2 00	0 00	2 00	0 96
19	ವಸತಿ	624 18	82 00	706 18	340 67
20	ನಗರಾಭಿವೃದ್ಧಿ	1831 70	136 29	1967 99	354 73
21	ವಿಶ್ವವಿದ್ಯಾನಿಲಯಗಳು ಮತ್ತು ಉನ್ನತ ಶಿಕ್ಷಣ	149 23	0 55	149 78	115 05
22	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ	1047 24	73 74	1120 98	1259 00
23	ವಾರ್ತಾ, ಪ್ರವಾಸೋದ್ಯಮ, ಕನ್ನಡ & ಸಂಸ್ಕೃತಿ	113 32	5 06	118 38	35 88
24	ಕ್ರೀಡೆ ಮತ್ತು ಯುವಜನ ಸೇವೆ	15 41	2 75	18 16	2 89
25	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	394 06	192 57	586 64	305 30
26	ಸಮಾಜ ಕಲ್ಯಾಣ	634 60	185 88	820 48	321 34
27	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	482 60	199 23	681 83	148 84
28	ಕಾರ್ಮಿಕ	46 17	13 30	59 47	12 48
29	ಯೋಜನೆ ಮತ್ತು ಸಾಂಖ್ಯಿಕ	154 28	4 25	158 54	62 51
30	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ	7 00	0 00	7 00	1 70
31	ಆಹಾರ ಮತ್ತು ನಾಗರೀಕ ಸರಬರಾಜು	3 20	0 00	3 20	1 34
32	ಆರ್ಥಿಕ	59 62	7 00	66 62	0 23
33	ಗೃಹ ಮತ್ತು ಸಾರಿಗೆ	719 47	0 00	719 47	77 61
34	ಕಂದಾಯ	171 35	6 30	177 65	40 13
35	ಕಾನೂನು	12 00	0 00	12 00	0 00
36	ಮೂಲಭೂತ ಸೌಲಭ್ಯಗಳ ಅಭಿವೃದ್ಧಿ	348 07	0 00	348 07	213 50
37	ಮಾಹಿತಿ ಮತ್ತು ತಂತ್ರಜ್ಞಾನ & ಜೈವಿಕ ತಂ	24 15	0 00	24 15	19 54
38	ವಿಜ್ಞಾನ ಮತ್ತು ತಂತ್ರಜ್ಞಾನ	9 93	0 00	9 93	2 12
	ಒಟ್ಟು	**16166 00**	**2361 99**	**18527 99**	**10282 82**